## ಸಮಾರಂಭಕ್ಕೆ ವಿಶೇಷ ಉಡುಗೊರೆ



ಸಭೆ ಸಮಾರಂಭಗಳಲ್ಲಿ ಊಟವಾದ ನಂತರ ಬಂದವರೆಲ್ಲರಿಗೆ ಫಲ–ತಾಂಬೂಲದ ಬದಲಿಗೆ ತರಕಾರಿ ಬೀಜಗಳಿರುವ (ಸೀಡ್ ಬಾಲ್) ಮಣ್ಣಿನ ಗೋಲಿಗಳ ಪಾಕೆಟ್‌ಗಳು, ಸಸಿಗಳನ್ನು ನೀಡುವ ಪದ್ಧತಿ ಈಚೆಗೆ ಹೆಚ್ಚಾಗಿ ಮುನ್ನೆಲೆಗೆ ಬರುತ್ತಿದೆ. 'ಹಸಿರಿದ್ದರೆ ನಮ್ಮೆಲ್ಲರ ಉಸಿರು' ಎಂಬುದು ಇದರ ಉದ್ದೇಶ. ಹಾಗೆಯೇ ಈ ಶುಭ ಸಂದರ್ಭದಲ್ಲಿ ನೀಡುವ ಸೀಡ್‌ಬಾಲ್ ಮತ್ತು ಸಸಿಗಳು ನಮ್ಮ ನಮ್ಮ ಮನೆಯ ಕೈತೋಟದಲ್ಲಿ, ಬಾಲ್ಕನಿಯಲ್ಲಿ ಬೇರೂರುತ್ತವೆ ಎಂಬುದು ಖುಷಿಯ ವಿಚಾರ. 'ಹಸಿರಿದ್ದರೆ ನಮ್ಮೆಲ್ಲರ ಉಸಿರು ಅಲ್ಲವೇ'. ಈ ದಿಶೆಯಲ್ಲಿ ನಮ್ಮ ಪರಿಸರ ಹಸಿರಾಗಿರಲು ಸಹಕರಿಸುವಂತೆ ಕೋರುವುದು ಇದರ ಮೂಲ ಉದ್ದೇಶ.

ಈಚೆಗೆ ಬೆಂಗಳೂರಿನ ಪ್ರಿಯಾಂಕಾ ಹಾಗೂ ಪ್ರದೀಪ್ ಅಗಡಿ ದಂಪತಿಗಳು ಖರೀದಿಸಿದ 'ನಮ್ಮ ಮನೆ'ಯ ಗೃಹಪ್ರವೇಶದ ವೇಳೆ ಅತಿಥಿಗಳಿಗೆ ಸಸಿಗಳನ್ನು, ಬಾವುಟ ನೀಡಿ ಮಾದರಿಯಾದರು. ಅದರ ಜೊತೆಗೆ ಸಿಲ್ವರ್ ಮೆಟಲ್ ಪುಟ್ಟ ಗಿಫ್ಟ್ ಸಹ ಇತ್ತು. ಮಳೆಗಾಲದಲ್ಲಿ ಸಸಿಗಳನ್ನು ನೆಟ್ಟರೆ ಚೆನ್ನಾಗಿ ಬೇರೂರಿ ಬೆಳೆಯುತ್ತವೆ ಎಂಬುದು ಸಸಿಗಳನ್ನು ಈ ಸಮಯದಲ್ಲಿ ಕೊಡುವ ಮತ್ತೊಂದು ಉದ್ದೇಶ. ಅದರಲ್ಲೂ ಹೂವಿನ ಗಿಡಗಳು ಹೆಚ್ಚು ಸಮೃದ್ಧಿಯಾಗಿ ಬೆಳೆಯುತ್ತವೆ. ವಿಶ್ವಪರಿಸರ ದಿನಾಚರಣೆ ದಿನದಲ್ಲಿ ಅಷ್ಟೇ ಯಾಕೆ... ವಿವಾಹ, ಜನ್ಮದಿನಾಚರಣೆ, ವಿವಾಹ ವಾರ್ಷಿಕೋತ್ಸವ, ಗೃಹಪ್ರವೇಶದಂತಹ ಸಮಾರಂಭಗಳಿಗೆ ಸಸ್ಯಗಳನ್ನು ನೀಡುವುದು ಸೂಕ್ತ. ಈ ನಿಟ್ಟಿನಲ್ಲಿ ಎಲ್ಲರೂ ಯೋಚಿಸಬೇಕು.

–ರಘುನಾಥರಾವ್ ತಾಪ್ಸೆ, ದಾವಣಗೆರೆ

## ಬೀದಿ ದೀಪದ 'ಆನ್ ಆಫ್' ಸ್ವಿಚ್!



ಭೌಗೋಳಿಕವಾಗಿ ಕರ್ನಾಟಕ ರಾಜ್ಯದ ಮಧ್ಯ ಭಾಗದಲ್ಲಿರುವ ದಾವಣಗೆರೆ ಕರ್ನಾಟಕದ ಮ್ಯಾಂಚೆಸ್ಟರ್ ಎಂದೂ ಕರೆಸಿಕೊಳ್ಳುತ್ತದೆ. ರಾಜ್ಯದ ಪ್ರಮುಖ ವಿದ್ಯಾಕೇಂದ್ರವಾಗಿ ಬೆಳೆದ ಕಾರಣಕ್ಕೆ ವಿದ್ಯಾಕಾಶಿ ಅಂತಲೂ, ವಿಶಿಷ್ಟ ತಿನಿಸಿನಿಂದಲೂ ಬೆಣ್ಣೆ ದೋಸೆ ನಗರಿ ಅಂತಲೂ ಕರೆಸಿಕೊಳ್ಳುವ ದಾವಣಗೆರೆಗೆ ಈಗ ಸ್ಮಾರ್ಟ್ ಸಿಟಿ ಅನ್ನುವ ಪಟ್ಟ ಬೇರೆ. ಸ್ಮಾರ್ಟ್ ಸಿಟಿ ಯೋಜನೆಯಡಿ ದಿನದಿಂದ ದಿನಕ್ಕೆ ಸ್ಮಾರ್ಟ್ ಆಗುತ್ತಿದ್ದರೂ ಇಲ್ಲಿನ ಶಾಮನೂರು ರಸ್ತೆಯ ಬಾಪೂಜಿ ಸಮುದಾಯ ಭವನದ ಹತ್ತಿರದ ಸಿದ್ದವೀರಪ್ಪ ಬಡಾವಣೆಯ ಕ್ರಾಸ್‌ನಲ್ಲಿದ್ದ ಬೀದಿ ದೀಪದ ಸ್ವಿಚ್ ಆಫ್ ಪ್ರಕ್ರಿಯೆ ಮಾತ್ರ ಇನ್ನೂ ಸ್ಮಾರ್ಟ್ ಆಗದೆ ಅಪಾಯಕ್ಕೆ ಎಡೆ ಮಾಡಿಕೊಡುತ್ತಿದೆ.

ರಸ್ತೆ ಬದಿಯಲ್ಲಿದ್ದ ವಿದ್ಯುತ್ ಕಂಬದಲ್ಲಿ ಎರಡು ವಿದ್ಯುತ್ ವಾಹಕ ತಂತಿಗಳನ್ನು ಸಂಜೆ ಜೋಡಿಸಿದರೆ ಆ ಬೀದಿಯಲ್ಲಿನ ಎಲ್ಲಾ ದೀಪಗಳು ಪ್ರಜ್ವಲಿಸುತ್ತವೆ. ಹಾಗೆಯೇ, ಆ ತಂತಿಗಳನ್ನು ಬೇರ್ಪಡಿಸಿದರೆ ಬೀದಿ ದೀಪಗಳು ಸ್ವಿಚ್ ಆಫ್ ಆಗುತ್ತವೆ. ಈ ಪ್ರಕ್ರಿಯೆ ಸಲೀಸಾದರೂ ಇದು ಎಷ್ಟು ಸುರಕ್ಷಿತ ಅನ್ನುವ ಪ್ರಶ್ನೆ ಕಾಡುತ್ತದೆ. ಸ್ಮಾರ್ಟ್ ಮೀಟರ್ ಮೂಲಕ ಒಂದು ಬೀದಿಯಲ್ಲಿನ ಎಲ್ಲ ದೀಪಗಳನ್ನು ಒಂದೇ ಬಾರಿಗೆ ಆನ್ ಮತ್ತು ಆಫ್ ಮಾಡುವ ತಂತ್ರಜ್ಞಾನವಿರುವ ಬಗ್ಗೆ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಓದಿದ ನೆನಪು. ಅಂತಹ ತಂತ್ರಜ್ಞಾನಕ್ಕೆ ದಾವಣಗೆರೆಯು ಆದಷ್ಟು ಬೇಗ ಒಗ್ಗಿಕೊಂಡು ಸ್ಮಾರ್ಟ್ ಸಿಟಿ ಎಂಬ ಪಟ್ಟಕ್ಕೆ ನಿಜವಾದ ಅರ್ಥ ಕಲ್ಪಿಸಬೇಕಿದೆ.

–ಸೌಮ್ಯ ಶಿಗ್ಗಾಂವಕರ್, ಹಾಸನ

## ಮತ್ತೆ ಸಿಕ್ಕ ನಾಣ್ಯಗಳು!



ಹಿಂದಿನ ಕಾಲದ ನಾಣ್ಯಗಳನ್ನು ಗಮನಿಸಿದಾಗ ಆಕೃತಿ, ವಿಭಿನ್ನವಾದ ಶೈಲಿ ಜನರನ್ನು ಆಕರ್ಷಿತಗೊಳಿಸುತ್ತವೆ. ಅದಲ್ಲದೆ ಹಿಂದಿನ ರಾಜರ ಕಾಲದ ವ್ಯವಹಾರಿಕ ಚಿಹ್ನೆಗಳು, ರಾಜರ ಭಾವಚಿತ್ರ ಮತ್ತು ಆಳ್ವಿಕೆ ಮಾಡಿದ ಕಾಲ, ಗುರುತುಗಳನ್ನು ಈ ನಾಣ್ಯಗಳಲ್ಲಿ ಕಾಣಬಹುದು. ಪ್ರಸ್ತುತ ದಿನಗಳಲ್ಲಿ ಹಳೆಯ ನಾಣ್ಯಗಳ ಸಂಗ್ರಹಣೆ ಮಾಡುವ ಹವ್ಯಾಸಗಳನ್ನು ಜನರು ಬೆಳೆಸಿಕೊಂಡಿದ್ದಾರೆ. ಅಂತೆಯೇ ನಾನೂ. ಚಿತ್ರದಲ್ಲಿರುವ ಈ ನಾಣ್ಯಗಳು ಕಂಡುಬಂದಿದ್ದು ಬಂಟ್ವಾಳದ ಭಂಡಾರಿಬೆಟ್ಟಿನಲ್ಲಿ. ಹರಕೆ ಹುಂಡಿಗೆ (ತುಳು ಭಾಷೆಯಲ್ಲಿ ಮುಡಿಪು) ಹಾಕಿದ ಈ ನಾಣ್ಯಗಳು 1974ರಲ್ಲಿ ಬಂದ ನೆರೆಯಲ್ಲಿ ಕೊಚ್ಚಿಹೋಗಿದ್ದು, ಸುಮಾರು ವರ್ಷಗಳ ನಂತರ ಮತ್ತೆ ಸಿಕ್ಕಿದ್ದವು. ಈ ನಾಣ್ಯಗಳು ವಿಭಿನ್ನ ಶೈಲಿಯಿಂದ ಕೂಡಿದ್ದು ಹಳೆಯ ನಾಣ್ಯಗಳಾದರೂ ಆಕರ್ಷಣೀಯವಾಗಿವೆ.

–ಸೋನಿಕಾ, ಪಾಣೆಮಂಗಳೂರು, ದಕ್ಷಿಣ ಕನ್ನಡ

## ನೀವೂ ಬರೆಯಿರಿ

'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಗುವ 'ನಿಮ್ಮ ಪುಟ' ಓದುಗರ ಅಂಕಣಕ್ಕೆ ನಿಮ್ಮ ಸುತ್ತಮುತ್ತಲಿನ ವಿಶೇಷ ಸಂಗತಿಗಳ ಬಗ್ಗೆ ನೂರು ಪದಗಳ ಬರಹ ಮತ್ತು ಅದಕ್ಕೆ ಸಂಬಂಧಿಸಿದ ಚೆಂದದ ಫೋಟೊವನ್ನು ನಮಗೆ ಕಳುಹಿಸಿಕೊಡಿ.

**ವಿಳಾಸ:** editorsu@sudha.co.in

@SudhaWeekly